ಕವಿತೆ



## ಭುವನಾ ಹಿರೇಮಠ

ಕಲೆ: ರೂಪಶ್ರೀ ಕಲ್ಲಿಗನೂರು



# ಕಟ್ಟಕಡೆಯ ಸಿಬಿರು

ನೀ ಮುಖದ ಮೇಲೆ ಪಡಿಕಿಯ ಸೆರಗ ಎಳೆದು
ಒಂದು ಜಂಪು ನಿದ್ದೆ ಹೋದರೆ
ಹೊಲದ ಮ್ಯಾರಿಯ ಹುಲ್ಲ ಕಡ್ಡಿಯಷ್ಟೇ ನನ್ನಿರುವಿತ್ತು

ಬಾವಿ ಗದ್ದೆಯ ತುಂಬ ಅದೆಷ್ಟು ನೆಲ್ಲಿ
ಮಿಡಿ ಚಾಪುಹಾಸಿ ಕಾದಿದ್ದವು ನಿನಗಾಗಿ
ಅದರಲ್ಲೊಂದು ಸಣ್ಣ ಮಿಡಿಯಾಗಿ
ತೂಗಾಡುತ್ತಿದ್ದೆ ನಿನ್ನದೇ ಹೊಕ್ಕಳು ಬಳ್ಳಿಗೆ

ಅದೆಲ್ಲಿ ಮಾಯವಾದೆ ಕಾಲದ ಮಹಾನಗರದೊಳಗೆ
ಅಲೆದು ಅಲೆದು ಸುರುಳಿ ಸುತ್ತರಗಿ
ನೀರಡಿಸಿ ಮತ್ತೆ ತಲುಪಿದ್ದು ಅದೇ ಹಳ್ಳದ ದಡದ
ನೀನೆ ತೋಡಿಟ್ಟು ಹೋದ ವರತೆಗೆ

ಈಗ,
ಹಳ್ಳದ ಹೊಲದ ತುಂಬ ಬಿದಿರ ಮೆಳೆ ಎದ್ದಿವೆ
ಯಾವುದು ಬೆಳೆದು ಪೊದೆಯಾಗಿ
ನಿನ್ನಂತಾಗುವುದೊ? ಮುಂದಿನ ಸಾಗಿಗೆ
ನಿನ್ನ ಮಡಿಲಿಂದೇಳುವ ಕಟ್ಟಕಡೆಯ
ಸಿಬಿರು ನಾನಾಗಲೆ

ಹಂಗಾಮು ತಪ್ಪಿಸದೆ ನೀ ಊರಿದ ಕಾಳು ಕಾಳು
ಬಳ್ಳಿಯಾಗಿ ಬೆಳೆದು ನೆಲದ ಒಡಲಿನ ತುಂಬ
ಕರುಳ ಬಳ್ಳಿ ಒಂದೊಂದು ಬಳ್ಳಿಗೆ
ಹತ್ತಾರು ಮಕ್ಕಳು
ಕಿತ್ತ ಬಳ್ಳಿಯ ಸುತ್ತ ನಿನ್ನದೇ ಘಮಲು

ಅದೆಷ್ಟು ಒಳಗೆಳೆದುಕೊಂಡೆ ಸಡಿಲು ಬಿಡದೆ
ಏಕ ಕೇಂದ್ರದೊಳಗೆ ಸಣ್ಣ ಪರಿಧಿಯಾಗಿ
ನಿನ್ನ ಸುತ್ತಲೇ ಗಿರಕಿ ಹೊಡೆಯುತ
ಹತ್ತಿರ ಹತ್ತಿರ ತಲುಪುತ ನಾದ ಬಿಂದುವಿನೊಳಗೆ
ಲೀನವಾದ ಕ್ಷಣ ಹೊರಗೆಸೆದುಬಿಟ್ಟೆ ನನ್ನ
ಆ ಮುಕ್ತಿಯ ಕುಣಿಯಿಂದ

ಆತುಮದೊಳಗೆ ಪುಟ್ಟದೊಂದು ಖೋಲಿಯಿಲ್ಲವೆ?
ನನ್ನನೂ ನಿನ್ನೊಳಗೆ ಇರಿಸಿಕೊಳ್ಳಲು

ಯಾರಿಲ್ಲದೆಯೂ ಇರಬೇಕೆಂದು ಹೇಳುವ
ಲೋಕಾರೂಡಿಯ ಚಟಕ್ಕೆ ಇರಬೇಕು
ಎದೆಯ ತುಂಬ ನಿನ್ನವೇ ಹಾಡ ತುಂಬಿಕೊಂಡು
ಮತ್ತೊಂದಿಷ್ಟು ಕಣ ಸವರಿಕೊಂಡು

ಇಲ್ಲೀಗ ಯಾರೂ ಬದುಕುತ್ತಿಲ್ಲ
ಒಳಗಿನ ನೀನು ತೂಗುತಿರುವ ತೊಟ್ಟಿಲ ಕೂಸು
ಮಾಯೆ ಆಡಿಸಿದಂತೆ ಆಡುತಿರೊ ಮರುಳು